ಇಲ್ಲದೆ ಎಲ್ಲರೊಳಗೊಂದಾಗಿ ಜೊತೆಗೆ ಇರುವವರೇ. ಗೌರಿ ಹತ್ಯೆಯ ಬಳಿಕ ನಡೆದ ಬೃಹತ್ ಸಮಾವೇಶಕ್ಕೆ ನಾವು ಹಾಸನದಿಂದ ಬೆಂಗಳೂರಿಗೆ ಜೊತೆಯಲ್ಲಿ ಪ್ರಯಾಣಿಸಿದ ಮತ್ತು ಸಮಾವೇಶದಲ್ಲಿ ಭಾಗವಹಿಸಿದ ನೆನಪು ಇನ್ನೂ ಹಚ್ಚಹಸಿರಾಗಿದೆ. ಪ್ರಯಾಣದುದ್ದಕ್ಕೂ ಅವರ ಮಾತುಗಳು, 'ಚಳವಳಿಗಳಲ್ಲಿ ನಾವು ಎಡವಿದ್ದೆಲ್ಲಿ, ಏನು ಮಾಡಬೇಕು' ಎಂಬುದರ ಸುತ್ತಲೇ ಗಿರಕಿ ಹೊಡೆಯುತ್ತಿದ್ದವು. ಅವು ಎಲ್ಲರಲ್ಲೂ ಆತಂಕ ಮೂಡಿಸಿದ ದಿನಗಳು.

ಹಾಸನದಲ್ಲಿ ನಾವು ಗೆಳೆಯರು ಒಗ್ಗೂಡಿ ನಡೆಸುವ 'ನಾವು-ನಮ್ಮಲ್ಲಿ: ಅಭಿವ್ಯಕ್ತಿ ಕರ್ನಾಟಕ' ಕಾರ್ಯಕ್ರಮ ನಡೆದಾಗ ಬಾನು ಅವರು ತಾವು ಬರಹಗಾರ್ತಿಯಾಗಿ ಅನುಭವಿಸಿದ ಸಂಕಟಗಳನ್ನು ಮುಕ್ತವಾಗಿ ತೆರೆದಿಟ್ಟದ್ದರು. ಧಾರ್ಮಿಕವಾಗಿ ಎದುರಾದ ನಿರ್ಬಂಧ, ಜೀವಕ್ಕೆ ಅಪಾಯವೊದಗಿದ ಸಂದರ್ಭ, ಎಲ್ಲವನ್ನೂ ನೆನಪಿಸಿಕೊಂಡಾಗ ಇಡೀ ಸಭೆ ಉಸಿರು ಬಿಗಿಹಿಡಿದುಕೊಂಡು ಕೇಳಿತ್ತು. ಅವರಿಗೆ ಜೊತೆಯಾಗಿ ಬೆಂಬಲ ನೀಡಿದ ವ್ಯಕ್ತಿಗಳನ್ನು ಅವರು ನೆನಪಿಸಿಕೊಂಡರು. ನಮ್ಮ ಬಳಗ ಹಾಸನದಲ್ಲಿ ಮೊದಲಬಾರಿಗೆ 'ಮನುಜಮತ ಸಿನಿಯಾನ' ಹೆಸರಿನಲ್ಲಿ ಸಿನಿಹಬ್ಬವನ್ನು ಅಯೋಜಿಸಲು ನಿರ್ಧರಿಸಿದಾಗ ಬಾನು ಮೇಡಂ ಮೊದಲಿನಿಂದ ಕೊನೆಯವರೆಗೆ ಜೊತೆಗಿದ್ದರು. ಒಂದು ಹೊತ್ತು ಬಿರಿಯಾನಿಯನ್ನೂ ಪ್ರಾಯೋಜಿಸಿದ್ದು ಅದರ ಘಮವನ್ನು ನಾವು ಸ್ನೇಹಿತರೂ ಈಗಲೂ ನೆನಪಿಸಿಕೊಳ್ಳುತ್ತೇವೆ. ಹಾಸನದಲ್ಲಿ ರಾಜಕೀಯ ವ್ಯಕ್ತಿಯೊಬ್ಬರ ವಿಕೃತಿಗೆ ಹೆಣ್ಣುಮಕ್ಕಳು ಬಲಿಯಾದ ಹೊತ್ತಿನಲ್ಲೂ ಅವರು ಹೋರಾಟದ ಜೊತೆಗೂಡಿದ್ದರು.

ಒಬ್ಬ ವಕೀಲೆಯಾಗಿ ಹೆಣ್ಣುಮಕ್ಕಳು ಒಳಗೊಳಗೇ ಅನುಭವಿಸುತ್ತಿರುವ ಹೇಳಲಾಗದ, ಅನುಭವಿಸಲಾಗದ ಕಥೆಗಳನ್ನು ಅವರ ಬಾಯಿಯಿಂದಲೇ ಕೇಳಿದ್ದೇವೆ. ಎಷ್ಟೋ ಜನಕ್ಕೆ ಅವರು ಹೊರದಾರಿ ಕಂಡುಕೊಳ್ಳಲು ನೆರವಾಗಿದ್ದಾರೆ. ಇಂದಿನ ಸಾಮಾಜಿಕ ಬಿಕ್ಕಟ್ಟುಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ, ಅರಿಯುವ ಅವರ ಮಾತುಗಳನ್ನು ಇತ್ತೀಚಿನ ಹಲವು ಸಂದರ್ಶನಗಳಲ್ಲಿ ಕೇಳಿದ್ದೇನೆ. ಇಂದು ವಿಶ್ವದಾದ್ಯಂತ ಜೀವಪರ ಸ್ಪೇಸ್‌ಗಳು ಕುಗ್ಗುತ್ತಿರುವ ಬಗ್ಗೆ ಆತಂಕದಿಂದ ಮಾತಾಡುತ್ತಿದ್ದಾರೆ. ಜೊತೆಗೆ ಸಮಾಜೋ ಆರ್ಥಿಕ ನೆಲೆಯಲ್ಲಿ ವರ್ತಮಾನದ ತಲ್ಲಣಗಳನ್ನು ಅರಿಯುವ ಸೂಕ್ಷ್ಮ ಗ್ರಹಿಕೆ ಅವರ ಮಾತುಗಳ ಮೂಲಕ ವ್ಯಕ್ತವಾಗುತ್ತಿದೆ. ಇಂದು ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿದ್ದಾರೆ ಮತ್ತು ಯಶಸ್ವಿಯಾಗುತ್ತಿದ್ದಾರೆ. ಆದರೆ ಅದೇ ಪ್ರಮಾಣದಲ್ಲಿ ಗಂಡು ಮಕ್ಕಳು ಮುಂದೆ ಸಾಗದೇ ಇರುವುದು ಪರೀಕ್ಷಾ ಫಲಿತಾಂಶಗಳಲ್ಲಿ ಎದ್ದು ಕಾಣುತ್ತಿದೆ. ಇದು ಉದ್ಯೋಗ ಇನ್ನಿತರ ಸಂಗತಿಗಳಲ್ಲೂ ಪ್ರತಿಫಲಿತವಾಗುತ್ತದೆ. ಇದರಿಂದ ಪಿತೃಪ್ರಧಾನ ಕುಟುಂಬಗಳೊಳಗೆ ಆಗುತ್ತಿರುವ ತಲ್ಲಣಗಳ ಬಗ್ಗೆ ಅವರು ಮಾತನಾಡುತ್ತಾರೆ. ಅರೆ ವಿದ್ಯಾವಂತ ಹುಡುಗರು ಹೇಗೆ ಕೋಮುವಾದಿಗಳ ಕೈಯಲ್ಲಿ ದಾಳಗಳಾಗುತ್ತಿದ್ದಾರೆ ಎಂಬ ಆತಂಕವೂ ಜೊತೆಗಿದೆ. ಮಹಿಳೆಯರ ಮತ್ತು ಪುರುಷರ ಬಿಡುಗಡೆ ಎರಡೂ ಜೊತೆಗೇ ಆಗಬೇಕಾದ ಸಂಗತಿಗಳು ಎಂಬ ನೆಲೆ ಅವರ ಬರಹ-ಮಾತುಗಳಲ್ಲಿ ಪ್ರತಿಫಲಿತವಾಗುತ್ತದೆ. ಹೀಗಾಗಿ ಪಿತೃಪ್ರಾಧಾನ್ಯ, ಜಾತಿ, ಬಡತನ, ಮೂಲಭೂತವಾದ, ಕೋಮುವಾದಗಳ ಸಂಕೀರ್ಣ ಬೆಸುಗೆಯನ್ನು ಈ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

'ಭಾವನೆಗಳಿಗೆ ಎಲ್ಲೆ ಇಲ್ಲ' ಎನ್ನುವ ಬಾನು ಅವರ ಆಶಯಗಳು ಇಂದು ಗಡಿಗುರುತುಗಳನ್ನು ಮೀರಿ ಎಲ್ಲ ಮನಸ್ಸುಗಳನ್ನು ಮುಟ್ಟುತ್ತಿದೆ. ಬಾನು ಅವರ ಎಲ್ಲ ಬಗೆಯ ಕ್ರಿಯೆಗಳ ಹಿಂದಿರುವುದು ಸುತ್ತಲಿನ ವಿಷಮತೆಗಳನ್ನು ತೆರೆದು ತೋರುತ್ತಾ ಒಂದು ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗಬೇಕು ಎಂಬ ನಿರಂತರ ತುಡಿತ. ಒಂದೆಡೆ ಸಮುದಾಯಗಳೊಳಗಣ ಕಟ್ಟುಪಾಡುಗಳು, ಇನ್ನೊಂದೆಡೆ ಹೊರಗಿನ ಅಸಹಿಷ್ಣುತೆ – ಎರಡನ್ನೂ ಎದುರಾಗುತ್ತಾ ದಲಿತರು, ಮಹಿಳೆಯರು, ರೈತರ ತಲ್ಲಣಗಳಿಗೆ ದನಿಗೂಡಿಸುತ್ತಾ, ಬರೆಯುತ್ತಾ, ಕಟ್ಟುತ್ತಾ ಸಾಗಿ ಬಂದಿರುವ ಬಾನು ಅವರ ಪಯಣ ಇನ್ನಷ್ಟು ವಿವರಗಳೊಂದಿಗೆ ಹೊರಬರುವ ಅಗತ್ಯವಿದೆ. ಅದು ನಮ್ಮ ನಾಡು ಸಾಗಿಬಂದಿರುವ ಹೆಜ್ಜೆಗುರುತುಗಳನ್ನು ತೋರುವ ಕೆಲಸವೂ ಆಗುತ್ತದೆ. ●